ಒದಗಿಸಬೇಕು.

ಆ) ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿಯ ಶಿಫಾರಸ್ಸುಗಳನ್ನು ದಿನಾಂಕ ೨೨-೯-೧೯ಅಲಲರ ಸರ್ಕಾರಿ ಆದೇಶದಲ್ಲಿ ಈಗಾಗಲೇ ಒಪ್ಪಿಕೊಳ್ಳಲಾಗಿದೆ

೧) ಕೇಂದ್ರ ಕಟ್ಟಡದ ಸಂಶೋಧನೆ ಸಂಸ್ಥೆ, ರೂರ್ಕಿ, ಇವರಿಗೆ ಸಂಗಮೇಶ್ವರ ದೇವಾಲಯದ ಸಂರಕ್ಷಣಾ ಕ್ರಮವನ್ನು ಸೂಚಿಸುವಂತೆ ಕೋರಲಾಗಿತ್ತು. ಈ ಸಂಸ್ಥೆಯವರು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರ ಪ್ರಕಾರ ದೇವಾಲಯದ ಗರ್ಭ ಗುಡಿಯ ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಲಾಗಿದೆ, ಹಾಗೂ, ಐಕ್ಯ ಮಂಟಪಕ್ಕೆ ಹೋಗಲು ಶಾಶ್ವತ ಮೆಟ್ಟಿಲುಗಳಿಗೆ ಮುಖ್ಯ ವಾಸ್ತು ಶಿಲ್ಪಿಯವರಿಂದ ನೀಲಿ ನಕ್ಷೆ ತಯಾರಿಸಿ ಅಂದಾಜು ವೆಚ್ಚ ಪತ್ರಿಕೆಯನ್ನೂ ಸಹ ತಯಾರಿಸಲಾಗಿದೆ. ಈ ಅಂದಾಜು ವೆಚ್ಚ ಪತ್ರಿಕೆಗಳು ಪರಿಶೀಲನೆಯಲ್ಲಿ ಇರುತ್ತವೆ.

೨) ಸಂಕೀರ್ಣದ ಕಟ್ಟಡಗಳ ನಕ್ಷೆಗಳನ್ನು ಮುಖ್ಯ ವಾಸ್ತು ಶಿಲ್ಪಿಯವರು ತಯಾರಿಸಿದ್ದಾರೆ.

೩) ಸಂಕೀರ್ಣದ ಅಭಿವೃದ್ಧಿಗೆ ಬೇಕಾದ ಉಳಿದ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯ ಪ್ರಕಾರ ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ.

ಈ) ಸಂಗಮೇಶ್ವರ ದೇವಾಲಯದ ಸಂರಕ್ಷಣೆ ಹಾಗೂ ಹೊಸ ಸಂಗಮ ಸಂಕೀರ್ಣದ ಅಭಿವೃದ್ಧಿಗೆ ಸುಮಾರು ೧೩.೮೨ ಕೋಟಿ ರೂ. ಗಳು ಆಗಬಹುದೆಂದು (೧೯ಅಲಲ-೯೯ರ ದರಗಳ ಪ್ರಕಾರ) ಅಂದಾಜು ಮಾಡಲಾಗಿದೆ.

ತುಮಕೂರು ದೇವರಾಯನ ದುರ್ಗದಲ್ಲಿ ಪ್ರವಾಸಿ ಕೇಂದ್ರ ಸ್ಥಾಪಿಸುವುದು

೧೪೩೮ (೨೨೬೭) ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ತುಮಕೂರಿನ ದೇವರಾಯನ ದುರ್ಗದಲ್ಲಿ ಪ್ರವಾಸಿ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಇಲ್ಲಿ ಅಭಿವೃದ್ಧಿ ಕಾರ್ಯಗಳಿಗೇನಾದರೂ ಅನುದಾನ ನೀಡುವ ಯೋಜನೆ ಇದೆಯೇ?

ಇ) ಈ ಮೇಲ್ಕಂಡ ಸ್ಥಳದಲ್ಲಿ 'ಸಫಾರಿ ಪಾರ್ಕ್' ಪ್ರಾರಂಭಿಸುವ ಬಗ್ಗೆ ಪ್ರಸ್ತಾಪವಿದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಸರ್ಕಾರವು ದೇವರಾಯನ ದುರ್ಗವನ್ನು ಪ್ರವಾಸಿ ಕೇಂದ್ರವೆಂದು ಗುರುತಿಸಿದೆ. ಇಲ್ಲಿ ಎರಡು ಹಾಸಿಗೆಗಳಿಂದ ಕೂಡಿದ ಎರಡು ಕೊಠಡಿ, ಭೋಜನ ಕೊಠಡಿ ಹಾಗೂ ಅಡಿಗೆ ಕೋಣೆಗಳಿಂದ ಕೂಡಿದ ಪ್ರವಾಸಿ ಮಂದಿರವನ್ನು ನಿರ್ಮಿಸಲಾಗುತ್ತಿದೆ.

ಆ) ಸರ್ಕಾರವು ಪ್ರವಾಸಿ ಗೃಹದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು ರೂ. ೫೫,೦೦೦-೦೦ (ಐವತ್ತೈದು ಸಾವಿರ) ರೂಪಾಯಿಗಳನ್ನು, ದೇವಸ್ಥಾನದಿಂದ ಪ್ರವಾಸಿ ಮಂದಿರದವರೆಗೆ ಇರುವ ೬೦೦ ಮೀ. ದೂರದ ರಸ್ತೆಯನ್ನು ಉತ್ತಮಗೊಳಿಸಲು ರೂ. ೮೫,೫೦೦-೦ (ಎಂಭತ್ತೈದು ಸಾವಿರದ ಐನೂರು) ರೂಪಾಯಿಗಳ ಅಂದಾಜು ವೆಚ್ಚಕ್ಕೆ ೧೯೯೯-೨೦೦೦ರ ಪ್ರಸ್ತುತ ಸಾಲಿನಲ್ಲಿ